**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ಪ್ರಬಂಧಕರ ಕಛೇರಿ, ನಂ.1, ಅಲಿ ಆಸ್ಕರ್‌ರಸ್ತೆ, ಬೆಂಗಳೂರು-52.**

ಸಂಖ್ಯೆ: RCS/NML/NML1(NML1)/ 17/2026-MLPB ದಿನಾಂಕ: 21-05-2026

ವಿಷಯ: ಯತಿವರ ಚಿಟ್ಸ್ ಪ್ರೈವೇಟ್ ಲಿಮಿಟೆಡ್, ನಂ.716/1, ಡಿ ಬ್ಲಾಕ್, ಜೆ.ಪಿ.ನಗರ, ಮೈಸೂರು-570031. ಈ ವಿಳಾಸದಲ್ಲಿ ಚೀಟಿ ವ್ಯವಹಾರ ನಡೆಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಫೋರ್‌ಮನ್,ಯತಿವರ ಚಿಟ್ಸ್‌ಪ್ರೈವೇಟ್ ಲಿಮಿಟೆಡ್, ಮೈಸೂರು. ಇವರು ಪ್ರಸ್ತಾವನೆ ಸಲ್ಲಿಸಿದ ದಿನಾಂಕ. 15-04-2026.
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ರವರು ಚೀಟಿ ವ್ಯವಹಾರ ನಡೆಸಲು ಶಿಫಾರಸ್ಸು ಮಾಡಿ ಪ್ರಸ್ತಾವೆಯನ್ನು ಸಲ್ಲಿಸಿರುವ ದಿನಾಂಕ:18-04-2026.

*******

ಪ್ರಸ್ತಾವನೆ:

ಯತಿವರ ಚಿಟ್ಸ್ ಪ್ರೈವೇಟ್ ಲಿಮಿಟೆಡ್, ನಂ.716/1, ಡಿ ಬ್ಲಾಕ್, ಜೆ.ಪಿ.ನಗರ, ಮೈಸೂರು-570031. ಇಲ್ಲಿ ಹೊಸದಾಗಿ ಚೀಟಿ ವ್ಯವಹಾರ ನಡೆಸಲು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರಡಿ ಅನುಮತಿ ಕೋರಿ ಉಲ್ಲೇಖ (1) ರಲ್ಲಿ ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿದೆ. ಈ ಸಂಸ್ಥೆಯು ಚೀಟಿ ನಿಧಿಗಳ ಕಾಯ್ದೆ 1982ರ ಅವಕಾಶಗಳಿಗೆ ಒಳಪಟ್ಟು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು. ಇವರ ಕಛೇರಿಯಿಂದ ಸ್ಥಳ ಪರಿಶೀಲನೆ ನಡೆಸಿ, ಸ್ಥಳವು ಚೀಟಿ ವ್ಯವಹಾರ ನಡೆಸಲು ಸೂಕ್ತವಾಗಿರುತ್ತದೆ. ಚೀಟಿ ವ್ಯವಹಾರ ನಡೆಸಲು ಅನುಮತಿ ನೀಡಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಉಲ್ಲೇಖ (2) ರಲ್ಲಿ ವರದಿಸಿರುತ್ತಾರೆ, ಸಂಸ್ಥೆ ಚೀಟಿ ವ್ಯವಹಾರ ನಡೆಸಲು ಅನುಮತಿ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವೆಯನ್ನು ಆಧರಿಸಿ ಹಾಗೂ ಸ್ಥಳ ಪರಿಶೀಲನಾ ವರದಿಯ ಶಿಫಾರಸ್ಸಿನನ್ವಯ ಚೀಟಿ ಸಂಸ್ಥೆಯು ಸಲ್ಲಿಸಿರುವ ದಾಖಲಾತಿಗಳ ವಿವರಗಳು ಕೆಳಕಂಡಂತಿದೆ.

| | | | | |
|---|---|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ | | ಯತಿವರ ಚಿಟ್ಸ್‌ಪ್ರೈವೇಟ್ ಲಿಮಿಟೆಡ್,<br>ನಂ.716/1, ಡಿ ಬ್ಲಾಕ್, ಜೆ.ಪಿ.ನಗರ, ಮೈಸೂರು-570031 | |
| 2 | ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರಡಿ ಅನುಮತಿ ಪಡೆದಿರುವ ಮೂಲ ಆದೇಶ | | ಮಾನ್ಯ ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು. ರವರ ಆದೇಶ ಸಂಖ್ಯೆ ಎನ್‌ಎಂಎಲ್ (2).ವೈಎಂಸಿ.53.2000-01 ದಿನಾಂಕ: 16-09-2000 (ಮಾರ್ಪಾಡು ಆದೇಶ ಸಂಖ್ಯೆ ಎನ್‌ಎಂಎಲ್(2). ವೈಎಂಸಿ.8. 2002-03 ದಿನಾಂಕ: 29-06-2002) | |
| 3 | ಕಂಪೆನಿ ನೋಂದಣಿ ವಿವರ | | ಈ ಚೀಟಿ ಸಂಸ್ಥೆಯು ಕಂಪನಿ ಕಾಯ್ದೆ 2013 ರ ರೀತ್ಯಾ ದಿನಾಂಕ: 21.11.2025 ರಂದು ನೋಂದಣಿಯಾಗಿರುತ್ತದೆ. ನೋಂದಣಿ ಸಂಖ್ಯೆ U64990KA2025PTC211136 ಆಗಿದೆ. | |
| 4 | PAN ಸಂಖ್ಯೆ | | AACCY1140J | |
| 5 | TAN ಸಂಖ್ಯೆ | | BLRY03893B | |
| 6 | GST ಸಂಖ್ಯೆ | | - | |
| 7 | ನಿರ್ದೇಶಕರು/ಪದಾಧಿಕಾರಿಗಳ ವಿವರ: | | | |
| | ಸಂ | ಹೆಸರು | ಹುದ್ದೆ | ವಿಳಾಸ |
| | 1 | ಶ್ರೀ ರವಿಶಂಕರ್.ಪಿ<br>ಆಧಾರ್ ಸಂ:<br>2921 2379 6719 | ನಿರ್ದೇಶಕರು/ ಫೋರಮನ್ | ಬಿನ್, ಪುಟ್ಟಮಲ್ಲಾಚಾರ್, ಮನೆ ಸಂಖ್ಯೆ2604/1, 5ನೇ ಕ್ರಾಸ್, ಹೊಸ ಬಂಡಿ ಕೇರಿ, ಕೆ ಆರ್ ಮೊಹಲ್ಲಾ, ಮೈಸೂರು-570004 |

| | | | | |
|---|---|---|---|---|
| | | . | | |
| | 2 | ಶ್ರೀಮತಿ ಸಾವಿತ್ರಿ ಎಸ್ ಆಧಾರ್ ಸಂ: 2355 1703 3602 | ನಿರ್ದೇಶಕರು | w/o ಶ್ರೀ ರವಿಶಂಕರ್.ಪಿ , ಮನೆ ಸಂಖ್ಯೆ2604/1, 5ನೇ ಕ್ರಾಸ್, ಹೊಸ ಬಂಡಿ ಕೇರಿ, ಕೆ ಅರ್ ಮೊಹಲ್ಲಾ, ಮೈಸೂರು-570004 |
| 8 | ಷೇರು ಬಂಡವಾಳ | | ರೂ.1.00ಲಕ್ಷ | |
| 9 | ಚೀಟಿ ನಡೆಸಲು ಹೂಡಿರುವ ಬಂಡವಾಳ ಹಾಗು ಬ್ಯಾಂಕ್ ವಿವರ | | AXIS BANK LTD, GROUND FLOOR NO.407, 10$^{TH}$ MAIN, 1$^{ST}$ STAGE, JP NAGAR, MYSORE-570031. ಇಲ್ಲಿ ಖಾತೆ ಸಂ: 926020004953622 ರಲ್ಲಿ ದಿನಾಂಕ: 18-04-2026ಕ್ಕೆ ರೂ.105000/- (ರೂ. ಒಂದು ಲಕ್ಷದ ಐದು ಸಾವಿರ ಮಾತ್ರ). ಶಿಲ್ಕು ಹೊಂದಿರುತ್ತದೆ | |
| 10 | ಕ್ರಿಮಿನಲ್ ಪ್ರಕರಣಗಳ ಬಗ್ಗೆ ವಿವರ | | ನಿರ್ದೇಶಕರು ಹಾಗೂ ಫೋರ್‌ಮನ್ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿಲ್ಲದಿರುವ ಬಗ್ಗೆ ನೋಟರಿ ಪ್ರಮಾಣ ಪತ್ರಗಳನ್ನು ನೀಡಿರುತ್ತಾರೆ. | |
| 11 | ಫೋರ್‌ಮನ್ ನೇಮಕದ ಬಗ್ಗೆ | | ಫೋರಮನ್ ನೇಮಕ ಮಾಡಿಕೊಂಡಿರುವ ಬಗ್ಗೆ ನಡವಳಿ ಸಲ್ಲಿಸಿರುತ್ತಾರೆ | |

ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳು ಹಾಗೂ ಸಹಕಾರ ಸಹಕಾರ ಸಂಘಗಳ ಸಹಾಯಕ ನಿಬಂಧಕರ, ಮೈಸೂರು ರವರ ಶಿಫಾರಸ್ಸು ಆಧರಿಸಿ, ಚೀಟಿ ಅಧಿನಿಯಮ 1982 ರ ಪ್ರಕರಣ 19(1) ಪ್ರಕಾರ ಚೀಟಿ ವ್ಯವಹಾರ ಪ್ರಾರಂಭಿಸಲು ಷರತ್ತುಬದ್ಧ ಅನುಮತಿ ನೀಡುವ ಕುರಿತು ಈ ಕೆಳಕಂಡ ಆದೇಶ.

**ಆದೇಶ**

ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರನ್ವಯ ಯತಿವರ ಚಿಟ್ಸ್ ಪ್ರೈವೇಟ್ ಲಿಮಿಟೆಡ್, ನಂ.716/1, ಡಿ ಬ್ಲಾಕ್, ಜೆ.ಪಿ.ನಗರ, ಮೈಸೂರು-570031. ಇಲ್ಲಿ ಹೊಸದಾಗಿ ಚೀಟಿ ವ್ಯವಹಾರ ಪ್ರಾರಂಭಿಸಲು ಇದರ ಫೋರ್‌ಮನ್ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುತ್ತೇನೆ.

“ಷರತ್ತುಗಳು”

1. ಚೀಟಿ ನಿಧಿಗಳ ಕಾಯ್ದೆ 1982ರ ಕಲಂ 19(1)ರ ಈ ಅನುಮತಿಯು ಚೀಟಿ ವ್ಯವಹಾರ ಪ್ರಾರಂಭಿಸಲು ಮಾತ್ರ ಸೀಮಿತವಾಗಿದ್ದು ಚೀಟಿ ಗುಂಪು ರಚನೆಗೆ ಚೀಟಿ ಗುಂಪು ಮೊತ್ತಕ್ಕೆ ಅನುಗುಣವಾಗಿ ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಉಪನಿಬಂಧಕರು / ಸಹಕಾರ ಸಂಘಗಳ ಸಹಾಯಕ ನಿಬಂಧಕರವರಿಂದ ಅನುಮತಿ ಪಡೆದು ಚೀಟಿ ಗುಂಪು ಪ್ರಾರಂಭಿಸಬೇಕಾಗಿರುತ್ತದೆ.
2. ಈ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ಹಾಗೂ ನಿಯಮಗಳು 1983 ರನ್ವಯ ಚೀಟಿ ವ್ಯವಹಾರವನ್ನು ಮಾತ್ರ ನಡೆಸುವುದು. ಚೀಟಿ ನಿಧಿ ಕಾಯ್ದೆ 1982 ರ ಪ್ರಕರಣ (3)ಕ್ಕೆ ಪೂರಕವಾಗುವಂತೆ ಕಂಪನಿಯು ಮೆಮೋರಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಪೂರ್ವಾನುಮತಿ ಇಲ್ಲದೇ ಬದಲಾವಣೆ ಮಾಡತಕ್ಕದ್ದಲ್ಲ.
3. ಚೀಟಿ ನಿಧಿ ಕಾಯ್ದೆ ನಿಯಮ ಉಲ್ಲಂಘನೆಯಾಗಿರುವುದಿಲ್ಲವೆಂಬ ಮಾಹಿತಿಯನ್ನು ಪ್ರತಿ ಚೀಟಿ ಗುಂಪು ಪ್ರಾರಂಭಿಸುವಾಗ ಮತ್ತು ಕೊನೆಯಲ್ಲಿ ಭದ್ರತಾ ಠೇವಣಿ ಬಿಡುಗಡೆ ಸಂದರ್ಭದಲ್ಲಿ ಸಂಬಂಧಿತ ಪ್ರಾಧಿಕಾರಕ್ಕೆ ನೀಡತಕ್ಕದ್ದು.
4. ಸದರಿ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 4(1)ರ ಪ್ರಕಾರ ಚೀಟಿ ಗುಂಪುಗಳಿಗೆ ಪೂರ್ವ ಮಂಜೂರಾತಿ ಹಾಗೂ ಪ್ರಕರಣ 9(2)ರಂತೆ ಪ್ರಾರಂಭಿಕ ದೃಢೀಕರಣ ಪತ್ರಗಳನ್ನು ಸಹಕಾರ ಸಂಘಗಳ ಹಾಗೂ ಚೀಟಿ ಸಹಾಯಕ/ಉಪ ನಿಬಂಧಕರ ಸಕ್ಷಮ ಪ್ರಾಧಿಕಾರದಿಂದ ಪಡೆದು ವ್ಯವಹರಿಸತಕ್ಕದ್ದು.
5. ಚೀಟಿ ನಿಧಿ ಅಧಿನಿಯಮ 1982 ಪ್ರಕರಣ 12ರ ಪ್ರಕಾರಚೀಟಿ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ ಈ ಆದೇಶವನ್ನು ರದ್ದುಗೊಳಿಸಲಾಗುವುದು.
6. ಈ ಅನುಮತಿ ಆದೇಶಕ್ಕೆ ಲಗತ್ತಿಸಿರುವ ನಮೂನೆ-1 ರ ಮಾಹಿತಿಯನ್ನು ಈ ಅನುಮತಿ ಹೊರಡಿಸಿದ ಒಂದು ತಿಂಗಳೊಳಗಾಗಿ ಉಳಿತಾಯ ಖಾತೆ ಸಂಖ್ಯೆ ಒಳಗೊಂಡಂತೆ ಈ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನು, ಬದಲಾವಣೆಗೊಂಡ 2 ತಿಂಗಳೊಳಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು, ತಪ್ಪಿದಲ್ಲಿ ಈ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುವುದೆಂದು ತಿಳಿಯತಕ್ಕದ್ದು.

7. ನಿಬಂಧಕರು ಕಾಲ ಕಾಲಕ್ಕೆ ಹೊರಡಿಸುವ ನಿರ್ದೇಶನ/ಮಾರ್ಗಸೂಚಿ ಹಾಗೂ ಚೀಟಿ ನಿಧಿ ಅಧಿನಿಯಮ 1982 ಮತ್ತು ನಿಯಮಾವಳಿ 1983 ಕ್ಕೆ ತಿದ್ದುಪಡಿಯಾದ 3 ತಿಂಗಳೊಳಗಾಗಿ ಕಂಪನಿ ಅಳವಡಿಸಿಕೊಳ್ಳಲು ಬದ್ಧವಾಗಿರತಕ್ಕದ್ದು, ತಪ್ಪಿದಲ್ಲಿ ನೀಡಲಾದ ಅನುಮತಿಯನ್ನು ಯಾವುದೇ ಸಮಯದಲ್ಲಿ ರದ್ದು ಪಡಿಸಲಾಗುವುದೆಂದು ತಿಳಿಯತಕ್ಕದ್ದು.
8. ಈ ಅನುಮತಿ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ಸಂಸ್ಥೆಯು ಚೀಟಿ ವ್ಯವಹಾರವನ್ನು ಕೈಗೊಳ್ಳದಿದ್ದಲ್ಲಿ ಕಲಂ 19(1) ರ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.
9. ಚೀಟಿ ನಿಧಿಗಳ ಕಾಯ್ದೆ ಕಲಂ 13ರ ಅವಕಾಶದಲ್ಲಿ ತಿಳಿಸಿರುವ ಚೀಟಿಯ ಒಟ್ಟಾರೆ ಮೊತ್ತ (Agreegate chit amount) ನ್ನು ಮೀರದಂತೆ ಸಂಸ್ಥೆಯು ಚೀಟಿ ವ್ಯವಹಾರವನ್ನು ನಡೆಸತಕ್ಕದ್ದು. ಒಂದು ವೇಳೆ ಈ ಅವಕಾಶವು ಉಲ್ಲಂಘನೆಯಾದಲ್ಲಿ ಸಂಸ್ಥೆಯ ಸಂಬಂಧಪಟ್ಟವರೆಲ್ಲರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು.
10. ಚೀಟಿ ನಿಧಿಗಳ ಕಾಯ್ದೆ 1982 ಕಲಂ 21ರ ಅವಕಾಶದಲ್ಲಿ ತಿಳಿಸಿರುವ ಸೋಡಿ ಪ್ರಮಾಣಕ್ಕಿಂತ ಹೆಚ್ಚಿನ ಮೊತ್ತದ ಸೋಡಿಯನ್ನು ಪಡೆದಲ್ಲಿ ಫೋರ್‌ಮನ್ ಮತ್ತು ಸಂಸ್ಥೆಯ ಎಲ್ಲಾ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.
11. ಸಂಸ್ಥೆಯು ಚೀಟಿ ಕುರಿತಂತೆ ಯಾವುದೇ ಠೇವಣಿಯನ್ನು ಸಂಗ್ರಹಿಸುವಂತಿಲ್ಲ.
12. ಕಾರ್ಯವ್ಯಾಪ್ತಿ ನಿಬಂಧಕರು ಪ್ರತಿ ಚೀಟಿ ಗುಂಪುಗಳ ಭದ್ರತೆ ಮತ್ತು ಗುಂಪು ಕಾಲಾವಧಿ ಮುಗಿದ ನಂತರ ಭದ್ರತಾ ಮೊತ್ತ ವಾಪಸ್ಸು ಮಾಡುವಲ್ಲಿ ಕಾಯ್ದೆ ಮತ್ತು ನಿಯಮಗಳ ಅವಕಾಶ ಪಾಲನೆಯಾಗಿರುವುದು ಹಾಗೂ ಯಾವುದೇ ಚೀಟಿದಾರರಿಗೆ ಚೀಟಿ ಮೊತ್ತ ಬಾಕಿ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ಭದ್ರತಾ ಠೇವಣಿ ಮೊತ್ತವನ್ನು ಬಿಡುಗಡೆ ಮಾಡುವುದು. ತಪ್ಪಿದಲ್ಲಿ ಕಾರ್ಯವ್ಯಾಪ್ತಿ ನಿಬಂಧಕರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.
13. ಕಾರ್ಯವ್ಯಾಪ್ತಿ ಸಹಾಯಕ ನಿಬಂಧಕರು/ಉಪ ನಿಬಂಧಕರು ತಮ್ಮ ವ್ಯಾಪ್ತಿಯಲ್ಲಿನ ಚೀಟಿ ಸಂಸ್ಥೆಯ ವ್ಯವಹಾರಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆ ಮಾಡತಕ್ಕದ್ದು.
14. ಚೀಟಿ ನಿಧಿಗಳ ಕಾಯ್ದೆ ಮತ್ತು ನಿಯಮಗಳ ಅವಕಾಶಗಳನ್ವಯ ಕಾಲಕಾಲಕ್ಕೆ ಸಲ್ಲಿಸಬೇಕಾದಂತಹ/ ವರದಿಗಳು/ ದಾಖಲೆ / ಮಾಹಿತಿ/ನಡವಳಿಗಳನ್ನು ಸಂಸ್ಥೆಯ ಫೋರ್‌ಮನ್, ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳೇ ಜವಾಬ್ದಾರಿ ಹೊಂದಿರುತ್ತಾರೆ.
15. ಚೀಟಿ ನಿಧಿಗಳ ಕಾಯ್ದೆ 1982 ಮತ್ತು ಚೀಟಿ ನಿಧಿಗಳ ನಿಯಮಗಳು 1983ರ ಎಲ್ಲಾ ಅವಕಾಶಗಳನ್ನು ಸಂಸ್ಥೆಯು ಚಾಚೂ ತಪ್ಪದೆ ಪಾಲಿಸತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿ:21-05-2026 ರಂದು ಹೊರಡಿಸಿದೆ.

Digitally signed by
KANTHA RAJU P S
Date: 21-05-2026
17:39:56

(ಕಾಂತರಾಜು .ಪಿ.ಎಸ್, ಭಾ.ಆ.ಸೇ.)
ಸಹಕಾರ ಸಂಘಗಳ ನಿಬಂಧಕರು ಹಾಗೂ
ಚೀಟಿ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು

ಗೆ,
ಫೋರ್‌ಮನ್,
ಯತಿವರ ಚಿಟ್ಸ್ ಪ್ರೈವೇಟ್ ಲಿಮಿಟೆಡ್,
ನಂ.716/1, ಡಿ ಬ್ಲಾಕ್, ಜೆ.ಪಿ.ನಗರ, ಮೈಸೂರು-570031.

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ/ಕ್ರಮಕ್ಕಾಗಿ ರವಾನಿಸಿದೆ.:
1.ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು.
2.ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪ ವಿಭಾಗ, ಮೈಸೂರು.